**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 93/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.05**
**ದಿನಾಂಕಃ 18.06.2025** **ಸಿಡಬ್ಲ್ಯೂ.11**

| | |
|---|---|
| ಹೆಸರು | ಯಶವಂತ್ |
| ತಂದೆ ಹೆಸರು | ದರ್ಮರಾಜ |
| ವಯಸ್ಸು | 23 ವರ್ಷ |
| ಉದ್ಯೋಗ | ಫಾರ್ಮಸಿ ಕೆಲಸ |
| ವಾಸ ಸ್ಥಳ | ಅರಸಿಕೆರೆ |

**ಮುಖ್ಯ ವಿಚಾರಣೆಃ ಅಭಿಯೋಜನೆ ಪರವಾಗಿಃ**

ಚಾಸಾ.1 ರವರ ಪರಿಚಯವಿದೆ. ಚಾಸಾ.6 ಮತ್ತು 8 ರವರ ಪರಿಚಯವಿಲ್ಲ. ಆರೋಪಿಯ ಪರಿಚಯವಿದೆ.

ದಿಃ 22.02.2023 ರಂದು ನಾನು ಚಾಸಾ.1, 6 ಮತ್ತು 8 ಮತ್ತು ಆರೋಪಿ ಮೈಸುರಿನಿಂದ ಗೋವಾಕ್ಕೆ ಹೋಗುತ್ತಿದ್ದೆವು. ಅರಸಿಕೆರೆಯಿಂದ ಚಾಸಾ.8 ರವರು ನಮ್ಮೊಂದಿಗೆ ಬಂದರು. ಮೈಸೂರಿನಿಂದ ನಾವು ಹುಬ್ಬಳ್ಳಿವರೆಗೆ ರೈಲಿನಲ್ಲಿ ಪ್ರಯಾಣ ಮಾಡಿದೆವು ನಂತರ ಹುಬ್ಬಳ್ಳಿಯಿಂದ ಗೋವಾಕ್ಕೆ ಬಸನಲ್ಲಿ ಪ್ರಯಾಣ ಮಾಡಿದೆವು. ನಾವು ದಿಃ 23.02.2023 ರಿಂದ 25.02.2023 ರವರೆಗೆ ಗೋವಾದಲ್ಲಿ ಇದ್ದೆವು. ನಂತರ ದಿಃ 26.02.2023 ರಂದು ಸಂಜೆ ಗೋವಾದಿಂದ ಮೈಸೂರಿಗೆ ರೈಲಿನಲ್ಲಿ ಹೊರಟೆವು. ಸದರಿ ಸಂದರ್ಭದಲ್ಲಿ ನಾವು ರೈಲಿನಲ್ಲಿ ಇದ್ದಾಗ ರಾತ್ರಿ ಸುಮಾರು 11.00 ಗಂಟೆಗೆ ಆರೋಪಿ ಚಾಸಾ.1 ರವರಿಗೆ ಜಗಳ ಆಯಿತು. ನಂತರ ಮಾರನೇ ದಿನ ಬೆಳಿಗ್ಗೆ ಸುಮಾರು 7.45 ಗಂಟೆಗೆ ನಾವು ಮಲಗಿದ್ದಾಗ ನಮಗೆ ಬಾಟಲಿಯಿಂದ ಹೊಡೆದ ಶಬ್ದ ಕೇಳಿಸಿತು. ನಾನು ಎದ್ದು ನೋಡಿದಾಗ ಚಾಸಾ.1 ರವರ ತಲೆಯಿಂದ ರಕ್ತ ಬರುತ್ತಿತ್ತು. ಚಾಸಾ.1 ಕಿರುಚುತ್ತಿದ್ದರು. ಪಾಂಡುರಂಗ ರೈಲು ಇಳಿದು ಪಕ್ಕದ ಬೋಗಿಗೆ ಹೋದರು. ಅದೇ ಸಮಯಕ್ಕೆ ನಾನು, ಚಾಸಾ.6 ಮತ್ತು 1 ಹರಿಹರದ ಪ್ಲಾಟಪಾರಂ ನಲ್ಲಿ ಇಳಿದುಕೊಂಡೆವು. ಆಗ ಒಬ್ಬ ರೈಲ್ವೆ ಪೊಲೀಸರು ನಮ್ಮನ್ನು ಹರಿಹರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ.1 ರವರಿಗೆ ಚಿಕಿತ್ಸೆ ಕೊಡಿಸಿಕೊಂಡು ಬೆಂಗಳೂರಿಗೆ ಹೋದೆವು. ಚಾಸಾ.1 ರವರಿಗೆ ಆರೋಪಿ ಬಾಟಲಿಯಿಂದ ಹೊಡೆದಿದ್ದರಿಂದ ಗಾಯ ಆಗಿತ್ತು. ಈಗ ನ್ಯಾಯಾಲಯದಲ್ಲಿ ಪಾಂಡುರಂಗ ರವರು ಇದ್ದಾರೆ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ**

ಯಾರು ಯಾರನ್ನು ಯಾವುದರಿಂದ ಹೊಡೆದರು ಎಂದು ನಾನು ಕಣ್ಣಾರೆ ನೋಡಿಲ್ಲ ಎಂದರೆ

ಸರಿ. ಸಾಕ್ಷಿಯು ಮುಂದುವರೆದು  ನಾನು ಎದ್ದು ನೋಡಿದಾಗ ಚಾಸಾ.1 ರವರ ತಲೆಯಿಂದ ರಕ್ತ ಸುರಿಯುತ್ತಿತ್ತು ಎಂದು ನುಡಿಯುತ್ತಾರೆ. ಆರೋಪಿ ಚಾಸಾ.1 ರವರನ್ನು ಹೊಡೆದ ಬಗ್ಗೆ ಚಾಸಾ.1 ರವರು ಹೇಳಿದ ನಂತರ ನನಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಾಸಾ.1 ಚೀರಿಕೊಂಡಾಗ ನಾನು ಎದ್ದು ನೋಡಲಾಗಿ ಆರೋಪಿ ಪಾಂಡುರಂಗ ರವರ ಕೈಯಲ್ಲಿ ಒಂದು ಬಾಟಲಿಯಿತ್ತು ಮತ್ತು ಚಾಸಾ.1 ರವರ ತಲೆಗೆ ರಕ್ತ ಬರುತ್ತಿತ್ತು ಎಂದು ನುಡಿಯುತ್ತಾರೆ. ನಾವು ಮೈಸೂರಿನಿಂದ ಹುಬ್ಬಳ್ಳಿಗೆ ಹಾಗೂ ಹುಬ್ಬಳಿಯಿಂದ ಗೋವಾಕ್ಕೆ ಹೋಗುವ ಬಗ್ಗೆ ಬಸ್ ಮತ್ತು ರೈಲು ಟಿಕೆಟ್ ಗಳನ್ನು ಪೊಲೀಸರಿಗೆ ನೀಡಿರುತ್ತೇವೆ. ರೈಲು ನಂಬರ್ ನನಗೆ ನೆನಪಿಲ್ಲ. ಯಾವುದೇ ರೀತಿಯ ಘಟನೆ ನಡೆಯದಿದ್ದರೂ ಸಹ ಚಾಸಾ.1 ರವರಿಗೆ ಅನುಕೂಲವಾಗುವಂತೆ ಚಾಸಾ.1 ರವರೇ ತಾವೇ ಗಾಯ ಮಾಡಿಕೊಂಡಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ಸಂದರ್ಭದಲ್ಲಿ ನಾನು ಮತ್ತು ಅಮೋಘ ಚಾಸಾ.1 ಮದ್ಯಪಾನ ಸೇವನೆ ಮಾಡಿದ್ದೆವು ಎಂದರೆ ಸರಿಯಲ್ಲ. ನಾನು ಆರೋಪಿ ಕೈಯಲ್ಲಿ ಇದ್ದ ಬಾಟಲ್ ನ್ನು ನೋಡಿದರೆ ಗುರುತಿಸುತ್ತೇನೆ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ

**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 93/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ 18.06.2025** **ಸಿಡಬ್ಲ್ಯೂ.10**

| | |
|---|---|
| ಹೆಸರು | ಗೌಡರ ಬಸವರಾಜ |
| ತಂದೆ ಹೆಸರು | ಗೌಡರ ಗೋಣೆಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಹೆಚ್ ಸಿ |
| ವಾಸ ಸ್ಥಳ | ಹುಬ್ಬಳ್ಳಿ |

**ಮುಖ್ಯ ವಿಚಾರಣೆಃ ಅಭಿಯೋಜನೆ ಪರವಾಗಿಃ**

ನಾನು ಸನ್ 2019 ರಿಂದ 2024 ರವರೆಗೆ ಹೆಚ್ ಸಿ ಆಗಿ ಹರಿಹರ ರೈಲ್ವೇ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 27.02.2023 ರಂದು ಬೆಳಗಿವ ಜಾವ ನಾನು ಹರಿಹರದ ರೈಲ್ವೇ ಪ್ಲಾಟಪಾರಂ ನಂ. 3 ರಲ್ಲಿ ಕರ್ತವ್ಯದಲ್ಲಿ ಇದ್ದೆನು. ಬೆಳಿಗ್ಗೆ 7.46 ಗಂಟೆಗೆ ಒಂದು ರೈಲು ನಂ. 17310 ಬಂತು. 1 ನೇ ಬೋಗಿಯಿಂದ ನಾವು ಪರಿಶೀಲನೆ ಮಾಡುತ್ತಾ ಹೋಗುತ್ತಿರಬೇಕಾದರೆ ಹಿಂದಿನ ಬೋಗಿಯಿಂದ 3 ಜನ ಇಳಿಯಲು ಹೋದರು. ಸದರಿ 3 ಜನರಲ್ಲಿ ಒಬ್ಬರ ತಲೆಗೆ ರಕ್ತ ಬರುತ್ತಿತ್ತು. ಸದರಿಯವರನ್ನು ವಿಚಾರಿಸಲಾಗಿ ಗಾಯಾಳುವಿನ ಹೆಸರು ಅಮೋಘ ಎಂದು ಹೇಳಿದ್ದು ಇನ್ನುಳಿದ ಇಬ್ಬರ ಹೆಸರು ಗೊತ್ತಿಲ್ಲ. ಸದರಿ ಗಾಯಾಳು ಅವರ ಸ್ನೇಹಿತ ಪಾಂಡುರಂಗ ಎನ್ನುವವರು ಗಾಜಿನ ಓಟ್ಕಾ ಬಾಟಲ್ ನಿಂದ ತಮ್ಮ ತಲೆಗೆ ಹೊಡೆದಿರುವುದಾಗಿ ತಿಳಿಸಿದರು. ನಾನು ಸದರಿ ಆತನನ್ನು ಹರಿಹರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಕರ್ತವ್ಯಕ್ಕೆ ಹಾಜರಾದೆನು. ಆರೋಪಿಯನ್ನು ನಾನು ನೋಡಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಎಸ್ ಜೆ ವಕೀಲರಿಂದಃ**

ಪಾಂಡುರಂಗ ಎನ್ನುವವರನ್ನು ನಾನು ನೋಡಿಲ್ಲ. ನಾನು ಗಾಯಾಳುವನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ಈ ವಿಚಾರವನ್ನು ನಾನು ಪೊಲೀಸರಿಗೆ ಹೇಳಿ ಬರೆಸಿದ್ದೇನೆ. ಸದರಿ ಆಟೋ ನಂಬರ್ ನನಗೆ ನೆನಪಿಲ್ಲ. ನಾನು ಗಾಯಾಳುವಿಗೆ ಹೊಡೆಯಲು ಉಪಯೋಗಿಸಿದ ಬಾಟಲ್ ನೋಡಿಲ್ಲ. ನಾನು ಸದರಿ ದಿನ ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗಾಯಾಳು ಮತ್ತು ಆತನ ಸ್ನೇಹಿತರು ವಾಸ್ಕೋದಿಂದ ಅರಸಿಕೆರೆಗೆ ಹೋಗುತ್ತಿದ್ದರು ಎಂದು ಹೇಳಿದರು. ಚಾಸಾ.1 ರವರು ಯಾವುದೇ ರೀತಿಯ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ